## ಸತೀಶ್ ಜಾರಕಿಹೊಳಿಗೆ ಬೆಳಗಾವಿ ಕೈ ಟಿಕೆಟ್

ಬೆಂಗಳೂರು: ಬೆಳಗಾವಿ ಲೋಕಸಭಾ ಕ್ಷೇತ್ರದ ಉಪಚುನಾವಣೆಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ ಕಾಂಗ್ರೆಸ್ ಅಭ್ಯರ್ಥಿ ಎಂದು ಸಿದ್ದರಾಮಯ್ಯ ಘೋಷಿಸಿದ್ದಾರೆ. ಇದೇ



ವೇಳೆ ಸತೀಶ್ ಬುಧವಾರ ಮಧ್ಯಾಹ್ನ ಬಿ ಫಾರಂ ಪಡೆದು ಕೊಂಡಿದ್ದು, ಪಕ್ಷದ ವರಿಷ್ಠರ ಜತೆ ಚುನಾವಣೆ ವಿಷಯ ಚರ್ಚಿಸಲು ದೆಹಲಿ ಕಡೆ ಪ್ರಯಾಣ ಬೆಳೆಸಿದ್ದಾರೆಂದು ಮೂಲಗಳು ತಿಳಿಸಿವೆ. ತಮ್ಮ ಸಹೋದರ ರಮೇಶ್ ಜಾರಕಿಹೊಳಿ ಸಿಡಿ ಪ್ರಕರಣದ ಬಗ್ಗೆ ವಿಧಾನಸಭೆಯಲ್ಲಿ ಪಕ್ಷದ ಕಡೆಯಿಂದ ಹೋರಾಟ ನಡೆಯುತ್ತಿದ್ದ ಕಾರಣ ಸತೀಶ್ ವಿಧಾನಸೌಧದ ಕಡೆ ಮುಖ ಹಾಕಿರಲಿಲ್ಲ. ಬುಧವಾರ ವಿಧಾನಸೌಧಕ್ಕೆ ಆಗಮಿಸಿದರೂ ತಮ್ಮ ಜಿಲ್ಲೆಯ ಕೆಲ ಶಾಸಕರೊಂದಿಗೆ ಮೊಗಸಾಲೆಯಲ್ಲೇ ಸಮಯ ಕಳೆದರೇ ವಿನಾ ಪಕ್ಷದ ಹೋರಾಟದಲ್ಲಿ ಭಾಗಿಯಾಗಲು ವಿಧಾನಸಭೆ ಸಭಾಂಗಣದೊಳಗೆ ಕಾಲಿಡಲಿಲ್ಲ.